**ದಿನಾಂಕಃ 11-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ. ವಿ.ಕೆ. ವಕೀಲರಿಂದಃ**

1. ಇದೆ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಸಿ ಸಿ ನಂ. 1172/2022 ಹಾಗೂ ಸಿ ಸಿ ನಂ.1288/2022 ದಾಖಲಾಗಿರುತ್ತವೆ ಎಂದರೆ ಸರಿ. ಈ ಎರಡು ಪ್ರಕರಣಗಳು ಚೆಕ್ಕು ಬೌನ್ಸ ಪ್ರಕರಣಗಳಾಗಿದ್ದು ಅವುಗಳಲ್ಲಿ ನಾನು ಹಾಜರಾಗಿ ಜಾಮೀನು ಪಡೆದಿದ್ದೇನೆ ಎಂದರೆ ಸರಿ. ಸಿ ಸಿ ನಂ. 1172/2022 ರಲ್ಲಿ ಈ ಪ್ರಕರಣದ ಆರೋಪಿ ಯಾವ ದಾಖಲಾತಿಗಳ ಆಧಾರದ ಮೇಲೆ ಕೇಸ್ ಹಾಕಿರುತ್ತಾರೆ ಎಂದರೆ ಸಾಕ್ಷಿ ಅಗ್ರಿಮೆಂಟ್ ಹಾಗುಾ ಚೆಕ್ಕುಗಳ ಆಧಾರದ ಮೇಲೆ ಹಾಕಿರುತ್ತಾರೆ ಅಂತಾ ನುಡಿದಿರುತ್ತಾರೆ. ಸಿ ಸಿ ನಂ. 1172/2022 ನೇದ್ದನ್ನು ಈ ಪ್ರಕರಣದ ಆರೋಪಿ ನನ್ನ ವಿರುದ್ದ 2 ಲಕ್ಷ ರೂಪಾಯಿ ನಾನು ಕೊಡಬೇಕು ಅಂತಾ ಹಾಕಿರುತ್ತಾರೆ ಎಂದರೆ ಹೌದು ಅದರೆ ನಾನು ಎಲ್ಲಾ ಹಣವನ್ನು ನಾನು ಅವರಿಗೆ ವಾಪಸ್ಸು ಕೊಟ್ಟಿರುತ್ತೇನೆ ಅಂತಾ ನುಡಿಯುತ್ತಾರೆ.

2. ಆರೋಪಿ ನನಗೆ ಹುಟ್ಟಿದಾಗಿನಿಂದ ಪರಿಚಯ ಇರುತ್ತಾರೆ. ಅರೋಪಿ ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ದಾಖಲಾತಿಯ ಆಧಾರದ ಮೇಲೆ ಸಿ ಸಿ ನಂ. 1172/2022 ನ್ನು ನನ್ನ ವಿರುದ್ದ ಈ ಪ್ರಕರಣದ ಆರೋಪಿ ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿ ದಾಖಲಾತಿಯನ್ನು ನೋಡಿ ಗುರುತಿಸಿದ್ದರಿಂದ ಕರಾರು ಪತ್ರದ ದೃಢಿಕೃತ ನಕಲನ್ನು ಅಭಿಮುಖವಾಗಿ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ನ್ನು ಓದಿ ನೋಡಿ ನೋಟರಿ ಸಮಕ್ಷಮ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಓದಿ ನೋಡಿದ್ದು ನೆನಪಿಲ್ಲ

ಅದರೆ ಅರ್ಜೆಂಟಿನಲ್ಲಿ ಕೊಟ್ಟಿದ್ದರು ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ದಾಖಲು ಮಾಡುವುದಕಕ್ಕಿಂತ ಮೊದಲು ವಕೀಲರ ಮುಖಾಂತರ ನೋಟಿಸ್ ಕೊಟ್ಟಿದ್ದು ಅದಕ್ಕೆ ಆರೋಪಿ ಉತ್ತರ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ನಮ್ಮ ವಕೀಲರ ಮುಖಾಂತರ ಕಳುಹಿಸಿದ ನೋಟಿಸ್ ನಲ್ಲಿ ಏನು ಬರೆದಿದೆ ಅಂತಾ ತಿಳಿದುಕೊಂಡಿದ್ದೇನೆ. ನನ್ನ ನೋಟಸ್ ನಲ್ಲಿ ನಿಡಿ–1 ರ ಬಗ್ಗೆ ಉಲ್ಲೇಖ ಮಾಡಿದ್ದೇನೆ. ನಿಪಿ–3 ನಾನು ಆರೋಪಿಗೆ ನೀಡಿದಂತ ನೋಟಿಸ್ ಎಂದರೆ ಸರಿ. ನಿಪಿ–3 ರ ಯಾವ ಪ್ಯಾರಾದಲ್ಲಿ ನಿಡಿ–1 ರ ಉಲ್ಲೇಖ ಇದೆ ಎಂದರೆ ಸಾಕ್ಷಿ ನಿಪಿ–3 ನ್ನು ಓದಿ ನೋಡಿ ಅದರಲ್ಲಿ ನಿಡಿ–1 ರ ಬಗ್ಗೆ ಉಲ್ಲೇಖ ಇಲ್ಲ ಅಂತಾ ನುಡಿಯುತ್ತಾರೆ. ನಿಪಿ–3 ರಲ್ಲಿರುವ ಕೊನೆಯ ಪುಟದಲ್ಲಿರುವ ಎಡಗಡೆ ಸಹಿ ನನ್ನದು ಹಾಗೂ ಬಲಗಡೆ ನಮ್ಮ ವಕೀಲರದ್ದು ಎಂದರೆ ಸರಿ. ಸಾಕ್ಷಿ ನಿಪಿ–3 ರಲ್ಲಿವರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಿಪಿ–3 ರನ್ನು ನಾನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

3. ನನಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಓದಲು, ಬರೆಯಲು ಬರುತ್ತದೆ. ನಾನು 20 ವರ್ಷಗಳಿಂದ ವೈದ್ಯರಾಗಿ ಕೆಲಸ ಮಾಡುತ್ತಿದ್ದೇನೆ. 2018 ಅಕ್ಟೋಬರ್ ಕ್ಕಿಂತ ಮೊದಲು ಆರೋಪಿ ಎಲ್ಲಿ ಇದ್ದರೂ ವತು್ತು ಏನು ಉದ್ಯೋಗ ಮಾಡುತ್ತಿದ್ದರೂ ಅಂತಾ ನಿಮ್ಮಿಗೆ ಮಾಹಿತಿ ಇದೆ ಎಂದರೆ ಸಾಕ್ಷಿ ಇದೆ ಅವರು ಬೆಂಗಳೂರಿನಲ್ಲಿ ಕಂಪ್ಯೂಟರ್ ರಿಪೇರಿ ಮತ್ತು ಕಂಪ್ಯೂಟರ್ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದು ಅರೇಮಲ್ಲಾಪುರದ ಗ್ರಾಮ ಪಂಚಾಯಿತಿಯಲ್ಲಿ ಸಿವಿಲ್ ಕಂಟ್ರ್ಯಾಕರ್ ಕೆಲಸ ಮಾಡಿಕೊಂಡಿದ್ದರು ಅಂತಾ ನುಡಿಯುತ್ತಾರೆ. ಬೆಂಗಳೂರಿನ ಯಾವ ನಗರದಲಿಲ್ಲ ಕಂಪ್ಯೂಟರ್ ಕೆಲಸ ಮಾಡಿಕೊಂಡಿದ್ದರು ಅಂತಾ ನನಗೆ ಗೊತ್ತಿಲ್ಲ. 2018 ನೇ

ಸಾಲಿನಲ್ಲಿ ನಾನು ರಾಣೇಬೆನ್ನೂರಿನ ಮೆಡ್ಲೇರಿ ರಸ್ತೆಯಲ್ಲರುವ ಆದಿಶಕ್ತಿ ಗುಡಿಯ ಹತ್ತಿರ ಇರುವ ಕಾಂಪ್ಲೇಕ್ಸ ಕ್ಲಿನಿಕ್ ಇಟ್ಟು ಕೊಂಡಿದ್ದೆ ಎಂದರೆ  ಸರಿ. ಆಗ ನನಗೆ ಆರೋಪಿಯ ಪರಿಚಯ ಅಗಿರುತ್ತದೆ ಎಂದರೆ ಸಾಕ್ಷಿ ಅದಕ್ಕಿಂತ ಮೊದಲೇ ಪರಿಚಯ ಇತ್ತು ಅಂತಾ ನುಡಿಯುತ್ತಾರೆ.

4. ನಾನು ಕ್ಲಿನಿಕ್ ನಡೆಸುತ್ತೇನೆ ನೀನು ಅಲ್ಲಿಯೇ ಔಷಧಿ ಅಂಗಡಿ ಇಟ್ಟುಕೊ ಅಂತಾ ಆರೋಪಿಗೆ ನಾನೇ ಆಫರ್ ಮಾಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮಂದುವರೆದು ಅರೋಪಿಯೇ ತಾನು ಸಿವಿಲ್ ಕಂಟ್ರ್ಯಾಕ್ ಕೆಲಸದಲ್ಲಿ ಲಾಸ್ ಅಗಿದೆ ನಾನು ನಿಮ್ಮಲ್ಲಿಯೇ ಮೆಡಿಕಲ್  ಶಾಪ್ ನಡೆಸುತ್ತೇನೆ ಅಂತಾ ಕೇಳಿದರು ಅಂತಾ ನುಡಿಯುತ್ತಾರೆ. ಆರೋಪಿ ಮೆಡಿಕಲ್ ಶಾಪ್ ನ್ನು ತನ್ನ ಕ್ಲಿನಿಕ್ ಹತ್ತಿರ ತೆರೆದಿರುತ್ತಾರೆ ಎಂದರೆ ಸರಿ.  ನಾನು ರೋಗಿಗಳಿಗೆ ಬರೆದು ಕೊಡುವ ಔಷಧಿಗಳನ್ನು ಅವರು ಆರೋಪಿಯ ಮೆಡಿಕಲ್ ಶಾಪ್ ನಲ್ಲಿಯೇ ಖರೀದಿಸುತ್ತಿದ್ದರು ಎಂದರೆ ಸರಿ. ಇದು 2021 ರವರೆಗೂ ನಡೆದಿರುತ್ತದೆ ಎಂದರೆ ಸರಿ. ನಾನು ಬರೆದುಕೊಡುವ ಔಷಧಿಗಳಿಂದಲೇ ನಿನ್ನ ಮೆಡಿಕಲ್ ಶಾಪ್ ನಡೆಯುತ್ತಿದ್ದೆ ಹೀಗಾಗಿ ಬಂದ ಲಾಭದಲ್ಲಿ ನನಗೆ ಶೇಕಡಾ 60 ಕೊಡಬೇಕು ಅಂತಾ ನಾನು ಆರೋಪಿಗೆ ಒತ್ತಾಯ ಮಾಡಿದೆ ಎಂದರೆ ಸರಿಯಲ್ಲ. ಆರೋಪಿ ತಾನು ನಡೆಸುತ್ತಿದ್ದ ಔಷಧಿ ಅಂಗಡಿಗೆ ನನ್ನ ಹೆಸರು ಅಂದರೆ ಪ್ರಕಾಶ್ ಮೆಡಿಕಲ್ ಅಂತಾ ಹೆಸರು ಇಟ್ಟಿದ್ದರು ಎಂದರೆ ಸರಿ. 2020 ಡಿಸೆಂಬರ್ ನಂತರ ನಾನು ನನ್ನ ಕ್ಲಿನಿಕ್ ನ್ನು ರೈಲ್ವೆ ಗೇಟ್ ಹತ್ತಿರ ಇರುವ ಕಾಂಪ್ಲೇಕ್ಸ ಸಳಾಂತರ ಮಾಡಿದೆ ಎಂದರೆ ಸರಿ. ಆಗಲೂ ಸಹ ನಾನು ಬಂದ ಲಾಭದಲ್ಲಿ ಶೇಕಡಾ 60 ಕೊಡಬೇಕು ಅಂತಾ ಆರೋಪಿಗೆ ಒತ್ತಾಯ ಮಾಡಿದ್ದು ಅದನ್ನು ಅವರಿಂದ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ.  ರೈಲ್ವೆ ಗೇಟ್ ಹತ್ತಿರ ಇರುವ ನನ್ನ ಕ್ಲಿನಿಕ್ ಗೆ ಮುಂಗಡ ಹಣ 25,000/- ರೂ ವನ್ನು  ಮಾಲೀಕರಿಗೆ ಅರೊಪಿಯೇ ಕೊಟ್ಟಿರುತ್ತಾನೆ ಎಂದರೆ ಸರಿ. ಪ್ರತಿ ತಿಂಗಳು ನನ್ನ ಕ್ಲಿನಿಕ್

ಬಾಡಿಗೆಯನ್ನು ಆರೋಪಿಯೇ ಕೊಡುತ್ತಿದ್ದರು ಎಂದರೆ ಸರಿಯಲ್ಲ. ನಾನು ನನ್ನ ಕ್ಲಿನಿಕ್ ಬಾಡಿಗೆಯನ್ನು ಆರೋಪಿಯೇ ಕೊಡಬೇಕು ಹಾಗೂ ಬಂದ ಲಾಭದಲ್ಲಿ ಶೇಕಡಾ 60 ನ್ನು ನನಗೆ ಕೊಡಬೇಕು ಎನ್ನುವ ಉದ್ದೇಶದಿಂದಲೇ ಆರೋಪಿಯ ಇಕ್ವಿಸ್ಟಾರ್ ಬ್ಯಾಂಕ್ ಹಾಗೂ ಐ ಡಿ ಬಿ ಐ ಬ್ಯಾಂಕ್ ನ ಚೆಕ್ಕುಗಳನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ವಮ್ಮಿಬ್ಬರ ಮಧ್ಯ ಬಿನ್ನಾಬಿಪ್ರಾಯ ಬಂದಿದ್ದರಿಂದಲೇ ನಾನು ಮತ್ತು ಅರೋಪಿ ನಿಡಿ–1 ಕರಾರು ಪತ್ರ ಮಾಡಿಕೊಡು ಬೇರೆ ಬೇರೆಯಾಗಿರುತ್ತೇವೆ ಎಂದರೆ ಸರಿಯಲ್ಲ.

5. ಆರೋಪಿ ಔಷಧಿಗಳನ್ನು ತೆಗೆದಕೊಂಡು ಪಾರ್ಮಾದವರಿಗೆ ಪೇಮೆಂಟ್ ಮಾಡುತ್ತಿರಲಿಲ್ಲ ಹೀಗಾಗಿ ಪಾರ್ಮಾದ ವರು ನನ್ನ ಬಳಿ ಬಂದು ನಿಮ್ಮ ಮುಖ ನೋಡಿ ಆರೋಪಿಗೆ ಔಷಧಿಗಳನಲ್ಲು ಕೊಡುತ್ತೇವೆ ಅದರೆ ಅವರು ಪೇಮೆಂಟ್ ಮಾಡುತ್ತಿಲ್ಲ ಅಂತಾ ಪದೇ ಪದೇ ಕಿರಿಕಿರಿ ಮಾಡ ಹತ್ತಿದ್ದರು ಆ ಕಾರಣಕ್ಕಾಗಿ ನಿಡಿ–1 ಕರಾರು ಪತ್ರವನ್ನು ಮಾಡಿಕೊಳ್ಳುಲು ಪ್ರಸಂಗ ಬಂದಿತ್ತು. ಆರೋಪಿ ಲೈಸನ್ಸ ಹೊಲ್ಡರ್ ಅಗಿದ್ದು ಎಲ್ಲಾ ಪಾರ್ಮಾಸಿಟಿಕಲ್ ಕಂಪನಿಯವರು ಆರೋಪಿಗೆ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದರು ಎಂದರೆ ಸರಿ. ಸಾಮಾನ್ಯವಾಗಿ ಎಲ್ಲಾ ಲೈಸನ್ಸ ಹೊಲ್ಡರ್ ಗೆ ಪಾರ್ಮಾಸಿಟಿಕಲ್ ಕಂಪನಿಯವರು ಔಷಧಿಗಳನ್ನು ಸರಬರಾಜು ಮಾಡಿರುತ್ತಾರೋ ಅವರಿಂದಲೇ ಪೇಮೆಂಟ್ ಮಾಡಿಸಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ಮತ್ತು ಆರೋಪಿಯ ಮಧ್ಯ ಬಿನ್ನಾಭಿಪ್ರಾಯ ಬಂದಾಗ ಅದನ್ನು ಬಗೆಹರಿಸಲು ನಾರಾಯಣ್ ಅಂತರವಳ್ಳಿ ಹಾಗೂ ಪರಸಪ್ಪ ಮಾಕನೂರ್ ಅವರು ಪಂಚರಾಗಿ ನ್ಯಾಯಾಲಯ ಬಗ್ಗೆಹರಿಸಿದರು ಎಂದರೆ ಸಾಕ್ಷಿ ಇವರ ಜೊತೆಗೆ ಬೇರೆಯವರು ಇದ್ದರು ಅಂತಾ ನುಡಿಯುತ್ತಾರೆ. ಪಂಚಯಾತಿಯಲ್ಲಿ ಪ್ರಕಾಶ್ ನಾಗರಜ್ಜಿಯವರು ಸಹ ಭಾಗವಹಿಸಿದ್ದರು ಎಂದರೆ ಹೌದು

ಅವರಜೊತೆಗೆ ಬೇರೆಯವರು ಭಾಗವಹಿಸಿದ್ದರು ಎಂದು ನುಡಿಯುತ್ತಾರೆ. ನಿಡಿ-1 ಕ್ಕೆ ಸಾಕ್ಷಿದಾರರು ಅಂತಾ ನಾರಾಯಣ್ ಅಂತರವಳ್ಳಿ , ಪರಸಪ್ಪ ಮಾಕನೂರ್ ಮತ್ತು ಪ್ರಕಾಶ್ ನಾಗರಜ್ಜಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಆರೋಪಿಯ ಮಧ್ಯೆ ಭಿನ್ನಾಭಿಪ್ರಾಯ ಬಂದು ವ್ಯವಹಾರವನ್ನು ಮುಕ್ತಾಯಗೋಳಿಸಿದಾಗ ನನ್ನ ಮತ್ತು ಆರೋಪಿಯ ಮಧ್ಯೆ ಮನಸಾ ಮನಸಾ ಸರಿ ಇರಲಿಲ್ಲ ವಿಶ್ವಾಸ ಕಳೆದುಕೊಂಡಿದ್ದೇವು ಎಂದರೆ ಸರಿಯಲ್ಲ.

6. ನವೆಂಬರ್ 2021 ರ ನಂತರ ನಾನು ಮತ್ತು ಅರೋಪಿ ಕೂಡಿಕೊಂಡು ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ 5 ಲಕ್ಷ ಹಣಕೊಡಬೇಕು ಅಲ್ಲದೆ ಪ್ರಕಾಶ್ ಮೆಡಿಕಲ್ ಹೆಸರಿನಲ್ಲಿರುವ ಎಲ್ಲಾ ಬಾಕಿಗಳನ್ನು ತೀರಿಸಬೇಕು ಅಂತಾ ನಿಡಿ-1 ರಲ್ಲಿ ಕರಾರು ಇತ್ತು ಎಂದರೆ ಸಾಕ್ಷಿ ಹೌದು ಕರಾರು ಇದದ್ದು ನಿಜ ಆ ಪ್ರಕಾರ ನಾನು ಆರೋಪಿಗೆ ಕೊಡಬೇಕಾದ 5 ಲಕ್ಷ ಹಣ ಮತ್ತು ಪ್ರಕಾಶ್ ಮೆಡಿಕಲ್ಸ್ ಎಲ್ಲಾ ಬಾಕಿಗಳನ್ನು ತೀರಿಸಿರುತ್ತೇನೆ ಅಂತಾ ನುಡಿಯುತ್ತಾರೆ. ಪ್ರಕಾಶ್ ಮೆಡಿಕಲ್ಸ್ ನ ಯಾವ ಯಾವ ಪಾರ್ಮಾಸಿಟಿಕಲ್ ಕಂಪನಿಯ ಎಷ್ಟು ಎಷ್ಟು ಹಣವನ್ನು ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿ ಆ ಬಗೆಗ ದಾಖಲಾತಿಗು ಇವೆ ಒಂದೇ ಸಾರಿ ಹಣವನ್ನು ಪಾವತಿ ಮಾಡಿಲ್ಲ ಹಂತ ಹಂತವಾಗಿ ಮಾಡಿದ್ದೇನೆ ಅಂತಾ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಇರಿಕಲ್ ಡ್ರಗ್ಸ್ ಹೌಸ್ ನ ಒಂದೂವರೆ ಲಕ್ಷ ಹಣವನ್ನು ಪಾವತಿ ಮಾಡಿದ್ದೇನೆ ದಿನಾಂಕ, ತಿಂಗಳು ನೆನಪಿಲ್ಲ. ಹಣವನ್ನು ನಾನು ನಗದಾಗಿ ತುಂಬಿರುತ್ತೇನೆ. ಅದೇ ರೀತಿ ಸಾಮಂತ್ರಿ, ರಾಜಸನ್ಸ್, ಎ.ಕೆ. ಪಾರ್ಮಾ, ಎಸ್ ವಿ ಪಾರ್ಮಾ, ಧನಲಕ್ಷ್ಮಿ ಪಾರ್ಮಾ, ಧಾನ್ಯ ಪಾರ್ಮಾ,ವೀರ್ ಪುರ್ ಪಾರ್ಮಾ, ದೀಪಕ್ ಏಜೆನ್ಸಿ ಪಾರ್ಮಾ, ಶ್ರೀ ಗುರು ಎಂಟರ್ ಪ್ರೈಸಸ್ ದಾವಣಗೆರೆ ಮತ್ತು ಇತರೆ ಪಾರ್ಮಾಗಳಿಗೆ ಹಣವನ್ನು ಪಾವತಿ

ಮಾಡಿರುತ್ತೇನೆ. ಆ ಬಗ್ಗೆ ಗನನ್ನ ಬಳಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲು ಯಾವುದೇ ತೊಂದರೆ ಇಲ್ಲ.

**ನ್ಯಾಯಾಲಯದ ಬೆಳಗ್ಗಿನ ಅವಧಿ ಮುಗಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

<u>ದಿನಾಂಕಃ 11-07-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ. ವಿ.ಕೆ. ವಕೀಲರಿಂದಃ</u>

7. ಪ್ರಕಾಶ್ ಮೆಡಿಕಲ್ಸ್ ಪರವಾಗಿ ರಾಣೇಬೆನ್ನೂರು ತಾಲೂಕು ಅರೇಮಲ್ಲಾಪುರ ಉತ್ಸವಾಂಬ ಸ್ಸೊಸೈಟಿಯಲ್ಲಿ ಸಾಲ ಮಾಡಲಾಗಿತ್ತು ಎಂದರೆ ಸರಿ. ಸದರಿ ಸಾಲವನ್ನು ಮರುಪಾವತಿಮಾಡಿದ್ದರೋ ಇಲ್ಲವೋ ಎಂದು ಮಾಹಿತಿ ಇದೆಯಾ ಎಂದರೆ ಸಾಕ್ಷಿ ಅದು ಆರೋಪಿ ಮಾಡಿರುತ್ತಾರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಲ ಮರುಪಾವತಿ ಆಗಿದೆಯೋ ಇಲ್ಲವೋ ಎನ್ನುವುದನ್ನು ನೀವು ಖುದ್ದಾಗಿ ಹೋಗಿ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಆರೋಪಿಯೇ ಅದಕ್ಕೆ ಪಿಗ್ಮಿ ಕಟ್ಟುತ್ತಿದ್ದರು ಎಷ್ಟು ಕಟ್ಟಿದ್ದಾರೆ ಅಂತಾ ನಾನು ನೋಡಿಲ್ಲ. ಪ್ರಕಾಶ್ ಮೆಡಿಕಲ್ಸ್ ಗೆ ಸಂಬಂಧಿಸಿದಂತೆ ಜಿ ಎಸ್ ಟಿ ಯನ್ನು ಪೂರ್ತಿಯಾಗಿ ಪಾವತಿಸಿದ ಬಗೆಗ ನೀವು ಏನ್ನಾದರೂ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಇನ್ನು ಬಾಕಿ ಇದೆ ಅಂತಾ ನುಡಿಯುತ್ತಾರೆ. ಜಿ ಎಸ್ ಟಿ ಹಣವನ್ನು ಯಾರು ಯಾವ ತಾರೀಖಿನಂದು ತಂಬಿದ್ದಾರೆ ಅಂತಾ ನಾನು ತಿಳಿದುಕೊಂಡಿಲ್ಲ. ಈವತ್ತಿನ ಮಟ್ಟಿಗೆ ಜಿ ಎಸ್ ಟಿ ಹಣ ಎಷ್ಟು ಬಾಕಿ ಇದೆ ಅಂತಾ ತಿಳಿದುಕೊಂಡಿಲ್ಲ. ಪಾರ್ಮಾ ಗಳಿಗೆ ಸಂಬಂದಪಟ್ಟಂತೆ ನಾನು ಕೊನೆಯಾದಗಿ ಹಣವನ್ನು ಮೇ 2022 ರಲ್ಲಿ ಪಾವತಿ ಮಾಡಿರುತ್ತೇನೆ. ನಾನು ಮತ್ತು ಆರೋಪಿ ಸೇರಿಕೊಂಡು ಪ್ರಕಾಶ್ ಮೆಡಿಕಲ್ಸ್ ಗೆ ಸಂಬಂದಿಸಿದಂತೆ ನಿಡಿ-1 ಆದ ಮೇಲೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-1 ಕರಾರು ಪತ್ರ ಅದ ಮೇಲೆ ಆರೋಪಿ ನನ್ನನ್ನು ಭೇಟಿಯಾಗಿಲ್ಲ ಮತ್ತು

ವ್ಯವಹಾರವನ್ನು ಮಾಡಿಲ್ಲ ಎಂದರೆ ಸಾಕ್ಷಿ ಆರೋಪಿ ಪದೇ ಪದೇ ನನ್ನ ಕ್ಲಿನಿಕ್ ಗೆ ಬಂದು ಸ್ಕೊಸೈಟಿಯ ಹಣವನ್ನು ತುಂಬಿ ಮತ್ತು ಪಾರ್ಮಾದ ಹಣವನ್ನು ತುಂಬಿ ಅಂತಾ ಜಗಳ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಇದೇ ಕಾರಣದಿಂದಲೇ ಅಂದರೆ ಹಣ ತುಂಬುವ ವಿಚಾರದಲ್ಲಿಯೇ ನನ್ನ ಮತ್ತು ಆರೋಪಿಯ ಸಂಬಂದ ಬಿರುಕು ಆಗಿರುತ್ತದೆ ಎಂದರೆ ಸರಿ.

8. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ಪಾರ್ಮಾದ ಹಣವನ್ನು ತುಂಬಿದ ಬಗೆಗ ನಾನು ಆದಾಯ ತೆರಿಗೆ ರೀಟರ್ನ್ ನಲ್ಲಿ ತೋರಿಸಿಲ್ಲ. 2021 ನವೆಂಬರ್ ತಿಂಗಳಿನಲ್ಲಿ ನಾನು ಆರೋಪಿಗೆ 5 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ಸದರಿ ಹಣವನ್ನು ನಾನು ನನ್ನ ಕ್ಲಿನಿಕ್ ನಲ್ಲಿ ಕೊಟ್ಟಿರುತ್ತೇನೆ. ಆ ಸಮಯಕ್ಕೆ ಆರೋಪಿ ಮತ್ತು ಅವರ ತಂದೆ ಇದ್ದರು. ಎಲ್ಲಾವು 500 ರೂ ಮುಖಬೆಲೆಯ ನೋಟ್ ಗಳಾಗಿದ್ದವು. ಹಣ ಕೊಟ್ಟ ಬಗ್ಗೆ ಅರೋಪಿಯಿಂದ ರಶೀದಿ ಪಡೆದಿಲ್ಲ. ಸಾಕ್ಷಿ ಮುಂದುವರೆದು ಅರ್ಜೆಂಟಾಗಿ ಹಣ ಬೇಕಾಗಿದೆ ಚೆಕ್ಕು ಮತ್ತು ಬಾಂಡ್ ಗಳನ್ನು ವಾಪಸ್ಸು ಕೊಡುತ್ತೇನೆ ಅಂತಾ ಹೇಳಿ ಹಣ ಪಡೆದಿರುತ್ತಾರೆ. 5 ಲಕ್ಷ ಹಣ ಆ ದಿನ ನಮ್ಮ ಮನೆಯಲ್ಲಿ ಇತ್ತು, ಅದನೇ ತಂದು ನಾನು ಆರೋಪಿಗೆ ಕೊಟ್ಟಿರುತ್ತೇನೆ.

9. ನಾನು ನನ್ನ ಪೆಡರಲ್ ಬ್ಯಾಂಕ್ ಚೆಕ್ಕು ನಂಬರ್ 092228 ಹಾಗೂ 082229 ನೇದ್ದವುಗಳನ್ನು ನಾನು ಅರೋಪಿಗೆ ಕೊಟ್ಟಿದ್ದೆ ಎಂದರೆ ಸಾಕ್ಷಿ ಹೌದು ಬಾಂಡ್ ಮಾಡಿಕೊಳ್ಳುವ ಸಮಯಕ್ಕೆ ನಾನು ಅವುಗಳನ್ನು ಅರೋಪಿಗೆ ಕೊಟ್ಟಿದ್ದೆ ಅದರೆ ಆರೋಪಿ ನನಗೆ ಅವುಗಳನ್ನು ವಾಪಸ್ಸು ಕೊಟ್ಟಿಲ್ಲ ಅಂತಾ ನುಡಿಯುತ್ತಾರೆ. 5 ಲಕ್ಷ ಹಣದ ಸಲುವಾಗಿಯೇ ನಾನು ಆರೋಪಿಗೆ ಮೇಲೆ ಹೇಳಿದ ಪೆಡರಲ್ ಬ್ಯಾಂಕ್ ನ ಎರಡು ಚೆಕ್ಕುಗಳನ್ನು ಕೊಟ್ಟಿದ್ದೆ ಅಲ್ಲದೆ 5 ಲಕ್ಷ ಹಣವನ್ನು ನಾನು ಕೊಟ್ಟಿಲ್ಲ ಎಂದರೆ ಸಾಕ್ಷಿ ಆರೋಪಿಗೆ 5 ಲಕ್ಷ ಕೊಟ್ಟಿದ್ದೆ ಅದರೆ ಚೆಕ್ಕುಗಳನ್ನು

ಹುಡುಕಿಕೊಡುತ್ತೇನೆ ಅಂತಾ ಹೇಳಿ ಆರೋಪಿ ನನಗೆ ಅವುಗಳನ್ನು ವಾಪಸ್ಸು ಕೊಟ್ಟಿರುವುದಿಲ್ಲ ಅಂತಾ ನುಡಿಯುತ್ತಾರೆ.

10. ಆರೋಪಿ ಇವತ್ತಿಗೂ ಸಹ ಒಂದು ಔಷಧಿ ಮಳಿಗೆಯನ್ನು ನಡೆಸುತ್ತಿದ್ದಾರೆ ಎಂದರೆ ಸರಿ. ಆರೋಪಿ ಜನವರಿ 2022 ರಲ್ಲಿ ಹಣ ಬೇಕು ಅಂತಾ ನನನ್ನು ಕೇಳಿದರು, ದಿನಾಂಕ ನೆನಪಿಲ್ಲ. ಅರೋಪಿ ಹಣ ಬೇಕು ಅಂತಾ ನನ್ನ ಆಸ್ಪತ್ರೆಯಲ್ಲಿ ಕೇಳಿದರು ಆ ಸಮಯಕ್ಕೆ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ಆರೋಪಿ 10 ಲಕ್ಷ ಹಣ ಬೇಕು ಅಂತಾ ಕೇಳಿದರು ಅದರೆ ನಾನು ಒಂದು ಸಾರಿ 4,50,000/- ಹಾಗೂ ಇನ್ನೊಂದು ಸಾರಿ 4,80,000/- ಒಟ್ಟು 9,30,000/- ರೂ ಹಣವನ್ನು ಕೊಟ್ಟಿರುತ್ತೇನೆ. ಜನವರಿ 2022 ಕೊನೆಯ ವಾರದಲ್ಲಿ ನನ್ನ ಆಸ್ಪತ್ರೆಯಲ್ಲಿಯೇ 4,50,000/- ರೂ ಹಣವನ್ನು ನಾನು ಆರೋಪಿಗೆ ಕೊಟ್ಟಿರುತ್ತೇನೆ. ಫ್ರೆಬವರಿ 2022 ಮೊದಲನೇ ವಾರದಲ್ಲಿ ನನ್ನ ಆಸ್ಪತ್ರೆಯಲ್ಲಿಯೇ 4,80,000/- ರೂ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಹಣ ಕೊಟ್ಟ ಬಗ್ಗೆ ಆಯಾ ದಿನಗಳಂದು ಆರೋಪಿಯ ಕಡೆಯಿಂದ ಯಾವುದೇ ದಾಖಲಾತಿಗಳನ್ನು ಪಡೆದಿಲ್ಲ. ಲ್ಯಾಬ್‌ಟಾಪ್ , ಕಂಪ್ಯೂಟರ್ ರಿಪೇರಿ ಹಾಗೂ ಮಾರಾಟವನ್ನು ಅರೋಪಿ ಯಾವತ್ತೂ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕೊಟ್ಟ 9,30,000/- ರೂ ಹಣವನ್ನು ನಾನು ನನ್ನ ಆದಾಯ ತೆರಿಗೆ ರಿರ್ಟನ್ ನಲ್ಲಿ ತೋರಿಸಿಲ್ಲ.

11. ನಿಪಿ-1 ರಲಿಲರುವ ಸಹಿ ಇಂಕಿಗೂ ಮತ್ತು ಬರವಣಿಗೆಯಲ್ಲಿರುವ ಇಂಕಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ -1 ರಲ್ಲಿರುವ ಸಹಿಯನ್ನು ನಾನೇ ಮಾಡಿ , ಅದರ ಮೇಲೆ ಇರುವ ಬರವಣಿಗೆಯನ್ನು ಸಹ ನಾನೇ ಮಾಡಿಕೊಂಡು ಬ್ಯಾಂಕ್ ಗೆ ಹಾಜರು ಪಡಿಸಿರುತ್ತೇನೆ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ-1 ರ ಮೇಲೆ ಆರೋಪಿಯೇ ಬರವಣಿಗೆ ಮಾಡಿ ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಯಾವ ರೀತಿ ಸಹಿ ಮಾಡುತ್ತಾರೆ ಅಂತಾ ನನಗೆ ಗೊತ್ತಿಲ್ಲ ಅದರೆ ಅವರು ಇಂಗ್ಲಿಷ್ ನಲ್ಲಿ ಸಹಿ ಮಾಡುತ್ತಾರೆ.

12. ಸಾಕ್ಷಿಗೆ ಆರೋಪಿ ಪರ ವಕೀಲರು ಆರೋಪಿ ಪರವಾಗಿ ಸಲ್ಲಿಸಿದ ವಕಾಲತ್ ನ್ನು ತೋರಿಸಿ ಅದರಲ್ಲಿರುವ ಆರೋಪಿಯ ಸಹಿಯನ್ನು ತೋರಿಸಿ ಈ ಸಹಿ ಯಾರದ್ದು ಅಂತಾ ಹೇಳಲು ಬರುತ್ತಾ ಅಂತಾ ಮಾಡಿದ ಸಲಹೆಗೆ ಸಾಕ್ಷಿ ಸದರಿ ಸಹಿಯನ್ನು ತನ್ನಗೆ ಗುರುತಿಸಲು ಆಗುವುದಿಲ್ಲ ಅಂತಾ ಹೇಳುತ್ತಾರೆ. ನಿಪಿ-1(ಎ) ಸಹಿ ಆರೋಪಿಯದಲ್ಲ ಅದನ್ನು ನಾನು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿ ಅದು ಆರೋಪಿಯದ್ದೆ ಇರುತ್ತದೆ ಅದನ್ನು ನನ್ನ ಆಸ್ಪತ್ರೆಯಲ್ಲಿಯೇ ಮಾಡಿರುತ್ತಾರೆ ಅಂತಾ ನುಡಿಯುತ್ತಾರೆ. ಆರೋಪಿ ನಿಮ್ಮಗೆ ಚೆಕ್ಕುನ್ನು ಎಲ್ಲಿ ಕೊಟ್ಟಿರುತ್ತಾರೆ ಅಂತಾ ದೂರಿನಲ್ಲಿ ಮತ್ತು ನೋಟಿಸ್ ನಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆ ವಿಷಯ ಜರೂರು ಇರುವುದಿಲ್ಲ ಹೀಗಾಗಿ ಬರೆಸುವ ಅವಶ್ಯಕತೆ ಇರಲಿಲ್ಲ ಅಂತಾ ನುಡಿಯುತ್ತಾರೆ. ಆರೋಪಿಗೆ 4,80,000/- ರೂ ಯಾವ ದಿನಾಂಕದಂದು ಕೊಟ್ಟಿದ್ದೇನೆ ಎಂಬ ವಿಷಯವನ್ನು ದೂರಿನಲ್ಲಿ ಮತ್ತು ನೋಟಿಸ್ ನಲ್ಲಿ ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಬರೆಸಿದ್ದೇನೆ ಅಂತಾ ನುಡಿಯುತ್ತಾರೆ. ನನ್ನ ದೂರಿನ ಪುಟ ಸಂಖ್ಯೆ 2 ಪ್ಯಾರ ನಂ. 2 ರಲ್ಲಿ ಹಣ ಕೊಟ್ಟ ದಿನಾಂಕವನ್ನು ಬರೆಸಿದ್ದೇನೆ.

13. ಹರಿಹರ ತಾಲೂಕಿನ ಪಾಮೆನಹಳ್ಳಿಯ ಸುರೇಶ್ ಬಣಕಾರ್ ಎನ್ನುವವರು ನನಗೆ ಗೊತ್ತು ಎಂದರೆ ಸಾಕ್ಷಿ ಇಲ್ಲ, ಅವರ ಪರಿಚಯ ಇಲ್ಲ ಅಂತಾ ನುಡಿಯುತ್ತಾರೆ. ಈ ಪ್ರಕರಣವನ್ನು ವಾಪಸ್ಸು ತೆಗೆದುಕೊ ಅಂತಾ ಒತ್ತಡ ಹೇರುವ ಉದ್ದೇಶದಿಂದಲೇ ನಾನು ಆರೋಪಿಯ

ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಸುರೇಶ್ ಬಣಕಾರ್ ಎನ್ನುವವರ ಮೂಲಕ ಸಿ ಸಿ ನಂ. 1172/2022 ಹಾಗೂ ಸಿ ಸಿ ನಂ.1288/2022 ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಸುರೇಶ್ ಬಣಕಾರ್ ಮಿಲಾಪೆಯಾಗಿ ಸಿ ಸಿ ನಂ.2555/2022 ನೇದ್ದರಲ್ಲಿರುವ ಚೆಕ್ಕುನ್ನು ದುರುಪಯೋಗಪತಿಸಿಕೊಂಡು ಅದರ ಮೇಲೆ

ಆರೋಪಿಯ ಸಹಿಯನ್ನು ಖೊಟ್ಟಿರೀತಿಯಿಂದ ಮಾಡಿ ಸದರಿ ಪ್ರಕರಣವನ್ನು ಸುರೇಶ್ ಬಣಕಾರ್ ರವರ ಮೂಲಕ ಹರಿಹರ ಜೆ ಎಂ ಎಫ್ ಸಿ ನ್ಯಾಯಾಲಯದ ಮುಂದೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

14. ನನಗೆ ಎಕಲಾಸಪುರದ ಗ್ರಾಮದ ನಾರಾಯಣ ಅಂತರವಳ್ಳಿ ಗೊತ್ತು. ನಿಡಿ-1 ರಲ್ಲಿ ಸದರಿ ನಾರಾಯಣ ಅಂತರವಳ್ಳಿ ಸಹ ಒಬ್ಬ ಪಂಚರು ಎಂದರೆ ಸರಿ. ಸದರಿ ನಾರಾಯಣ ಅಂತರವಳ್ಳಿ ಯವರು ಪೋನ್ ನಂಬರ್ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಒಂದು ವೇಳೆ ಆರೋಪಿ ಸಿ ಸಿ ನಂ. 1172/2022 ಹಾಗೂ ಸಿ ಸಿ ನಂ.1288/2022 ರ ಪ್ರಕರಣಗಳನ್ನು ಆರೋಪಿ ವಾಪಸ್ಸು ತೆಗೆದುಕೊಳ್ಳದೆ ಇದ್ದರೆ ಅವನ ಎಲ್ಲಾ ಚೆಕ್ಕುಗಳನ್ನು ಬೇರೆಯವರ ಮುಖಾಂತರ ಪ್ರಕರಣಗಳನ್ನು ದಾಖಲಿಸುತ್ತೆನೇ ಅಂತಾ ನಾನು ನಾರಾಯಣ ಅಂತರವಳ್ಳಿ ಅವರೊಂದಿಗೆ ಪೋನಿನಲ್ಲಿ ಸಂಭಾಷಣೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 9,30,000/- ಹಣದ ತಿರುವಳಿಗಾಗಿ ನನಗೆ ನಿಪಿ-1 ನ್ನು ಕೊಟ್ಟಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಯಾ ತಾರೀಖಿನಂದು ಅಷ್ಟು ಮೊತ್ತದ ಹಣವನ್ನು ನಾನು ಆರೊಪಿಗೆ ಕೊಟ್ಟಿಲ್ಲ ಮತ್ತು ಕೊಡುವ ಸಾಮಥ್ಯವೂ ನನಗೆ ಇಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯು ಹೇಳಿರುವಂತಹ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

ಮೆಡಿಕಲ್ ಶಾಪ್ ನ ಆದಾಯದಿಂದ ಬರುವ ಹಣದಲ್ಲಿ ಶೇಕಡಾ 60 ಕೊಡಬೇಕು ಎನ್ನುವ ಸಲುವಾಗಿ ಆರೋಪಿಯಿಂದ ಚೆಕ್ಕುಗಳನ್ನು ನಾನು ದುರುಪಯೋಗಪಡಿಸಿಕೊಂಡು ಅವರ ಮೇಲೆ ಸುಳ್ಳು ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 26-11-2021 ಕ್ಕಿಂತ ಮೊದಲು ನಿವೇನಾದರೂ ಪ್ರಕಾಶ್ ಮೆಡಿಕಲ್ಸ್ ಎನ್ನುವ ನಾಮೆಯ ಹೆಸರಿನಲ್ಲಿ ಲೈಸನ್ಸ ಪಡೆದಿದ್ದಾರ ಎಂದರೆ ಸಾಕ್ಷಿ ನಾನು ಪಡೆದಿಲ್ಲ, ಅರೋಪಿ ಪಡೆದಿರುತ್ತಾರೆ ಅಂತಾ ನುಡಿದಿರುತ್ತಾರೆ.

ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಮತ್ತು ಯಾವುದೇ ಅಪರಾಧವನ್ನು ಸಹ ಮಾಡಿಲ್ಲ ಅದರೆ ನಾನು ಆರೋಪಿಯ ಚೆಕ್ಕನ್ನು ಖೊಟ್ಟಿ ರೀತಿಯಿಂದ ಸೃಷ್ಟಿ ಮಾಡಿಕೊಂಡು ಸುಳ್ಳು ಕೇಸ್ ದಾಖಲಿಸ್ದಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.